ಕೊಳವೆಗಳಲ್ಲಿ ನೀರು ಸೋರುತ್ತಿರುವುದು, ಸ್ಟಾರ್ಟರ್ ಕೆಟ್ಟಿರುವುದು, ಮೇಲ್ಮಟ್ಟದ ತೊಟ್ಟಿ ರಿಪೇರಿ, ಹೊಸ ವಿತರಣಾ ಪೈಪ್ ಅಳವಡಿಸುವುದು ಹಾಗೂ ಹಸ್ತಾಂತರದ ನಂತರ ಗ್ರಾಮ ನೀರು ನೈರ್ಮಲ್ಯ ಸಮಿತಿಯು ಸರಿಯಾಗಿ ಯೋಜನೆಯನ್ನು ನಿರ್ವಹಣೆ ಮಾಡದೇ ಇರುವುದು ಈ 8 ಗ್ರಾಮಗಳಲ್ಲಿ ನೀರಿನ ವ್ಯವಸ್ಥೆ ಸಮರ್ಪಕವಾಗದಿರಲು ಮುಖ್ಯ ಕಾರಣಗಳಾಗಿರುತ್ತವೆ.

ಈ) ಕುಡಿಯುವ ನೀರಿನ ಯೋಜನೆಗಳನ್ನು ಪೂರ್ಣಗೊಳಿಸಿದ ನಂತರ ಮುಂದಿನ ನಿರ್ವಹಣೆಗಾಗಿ ಗ್ರಾಮ ನೀರು ನೈರ್ಮಲ್ಯ ಸಮಿತಿಗೆ ಹಸ್ತಾಂತರಿಸಿದ ಮೇಲೆ, ಅವರು ಯೋಜನೆಯನ್ನು ಸಮರ್ಪಕವಾಗಿ ನಿರ್ವಹಣೆ ಮಾಡದೇ ಇರುವುದು, ಹಾಗೂ ಕೆಲವು ಸಂದರ್ಭಗಳಲ್ಲಿ ಯೋಜನೆಯ ಜಲಮೂಲವಾದ ಕೊಳವೆ ಬಾವಿಗಳು ಬತ್ತಿ ಹೋಗುವುದರಿಂದಲೂ ಮತ್ತು ವಿದ್ಯುತ್ತಿನ ಏರುಪೇರಿನಿಂದಲೂ ಯೋಜನೆಗಳು ವಿಫಲವಾಗಿರುತ್ತವೆ.

ಉ) ವಿದೇಶಿ ನೆರವಿನಿಂದ ಅನುಷ್ಠಾನಗೊಳಿಸಿ ಗ್ರಾಮ ನೀರು ಸರಬರಾಜು ಮತ್ತು ನೈರ್ಮಲ್ಯ ಸಮಿತಿಗಳಿಗೆ / ಗ್ರಾಮ ಪಂಚಾಯತಿಗಳಿಗೆ ವಹಿಸಿಕೊಟ್ಟ ಯೋಜನೆಗಳ ಅಭಿವೃದ್ಧಿ / ಪುನರುಜ್ಜೀವನ ಕಾರ್ಯವನ್ನು ಸರ್ಕಾರದ ಸುತ್ತೋಲೆ ಸಂಖ್ಯೆ ಗ್ರಾಅಪ / 14/ಪಿಪಿಎಂ/2002, ದಿನಾಂಕ 15.2.2002ರ ಪ್ರಕಾರ ಸಾಮಾನ್ಯ ಗ್ರಾಮೀಣ ನೀರು ಸರಬರಾಜು ಕಾರ್ಯಕ್ರಮಗಳಡಿಯಲ್ಲಿ ಕೈಗೊಳ್ಳಬೇಕಾಗಿರುತ್ತದೆ. ಅದರಂತೆ ಕೆಟ್ಟು ಹೋಗಿರುವ ಹಾಗೂ ಜಲಮೂಲಗಳನ್ನು ಕಳೆದುಕೊಂಡಿರುವ ಯೋಜನೆಗಳನ್ನು ಪುನರುಜ್ಜೀವನ ಗೊಳಿಸಲು ಸರ್ಕಾರ ವತಿಯಿಂದ ಹಾಗೂ ಜಿಲ್ಲಾ ಪಂಚಾಯತ್ ವತಿಯಿಂದ ಇತರೆ ಯೋಜನೆಗಳಲ್ಲಿ ಆದ್ಯತೆ ಮೇರೆಗೆ ಕಾಮಗಾರಿಗಳನ್ನು ತೆಗೆದುಕೊಂಡು ಪುನರುಜ್ಜೀವನಗೊಳಿಸಲಾಗುತ್ತಿದೆ.

ತುರುವೇಕೆರೆ ತಾಲ್ಲೂಕಿನಲ್ಲಿ ಬಯಲುಸೀಮೆಯ ಅಭಿವೃದ್ಧಿಗೆ ನಬಾರ್ಡ್ ಹಣ ಬಿಡುಗಡೆ

3566 (3516) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ಅಣ್ಣಯ್ಯ) (ತುರುವೇಕೆರೆ) : ಮಾನ್ಯ ಕೃಷಿ ಸಂಸ್ಕರಣೆ ಹಾಗೂ ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕಿಗೆ ಬಯಲುಸೀಮೆ ಅಭಿವೃದ್ಧಿ ಯೋಜನೆ ಅಡಿಯಲ್ಲಿ ದಂಡಿನಶಿವರ ದುಂಡ–ಬಾಣಸಂದ್ರ ರಸ್ತೆ ಕೆಲಸಕ್ಕೆ ಕೊಟ್ಟ ಪ್ರಸ್ತಾವನೆ ಎಲ್ಲಿದೆ:

ಆ) ಕಳೆದ ಮೂರು ವರ್ಷಗಳಿಂದ ಒಂದು ಪ್ರಸ್ತಾವನೆ ಯಾವ ಇಲಾಖೆಯಲ್ಲಿದೆ, ತಿಳಿಸುವುದು: (ಜಿಲ್ಲಾ ಪಂಚಾಯತ್/ನಬಾರ್ಡ್)

ಇ) ಈ ವರ್ಷವಾದರೂ ಈ ಕೆಲಸ ಪ್ರಾರಂಭಿಸಲಾಗುವುದೆ?

ಶ್ರೀ ಜಿ. ರಾಜುಗೌಡ (ಕೃಷಿ ಸಂಸ್ಕರಣೆ ಹಾಗೂ ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ ಸಚಿವರು):

ಅ), ಆ) ಮತ್ತು ಇ) ಈ ಕಾಮಗಾರಿಗೆ ದಿನಾಂಕ: 22.3.2001 ರಲ್ಲಿ ನಡೆದ ಉಪ ಸಮಿತಿಯಲ್ಲಿ ಅನುಮೋದನೆಗೊಂಡಿದ್ದು, ಸಂಪನ್ಮೂಲಗಳನ್ನಾಧರಿಸಿ ಈ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದು.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಸ್ವಜಲಧಾರೆ ಯೋಜನೆ ಅನುಷ್ಠಾನ

3567 (4074) ಶ್ರೀ ಮಲ್ಲಿಕಾರ್ಜುನ ಕೆ.ಬಿ. (ಬೀರೂರು) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?